ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಲಯ ದಕ್ಷಿಣ

ಜಯನಗರ ಪೂರ್ವ, ವಾರ್ಡ್ ಸಂಖ್ಯೆ: 170

ದಿನಾಂಕ 29.01.2022 ರಂದು ವಾರ್ಡ್ ನಂ.170, ಜಯನಗರ ಪೂರ್ವದಲ್ಲಿ ಮಾನ್ಯ ಶಾಸಕರು ಜಯನಗರ ಹಾಗೂ ವಾರ್ಡ್ ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಭೆ.

## ಸಮಿತಿ ಸಭೆಯ ನಡವಳಿಗಳು

ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು:-

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 01 | ಸನ್ಮಾನ್ಯ ಸೌಮ್ಯರೆಡ್ಡಿ | ಶಾಸಕರು ಜಯನಗರ |
| 02 | ಶ್ರೀಮತಿ ಸಂಧ್ಯಾರಾಣಿ | ಅಧ್ಯಕ್ಷರು |
| 03 | ಶ್ರೀ ರಿಜ್ವಾನ್ ನವಾಬ್ | ಮಾಜಿ ಬಿಬಿಎಂಪಿ ಸದಸ್ಯರು |
| 04 | ಶ್ರೀಮತಿ ಅನುಷಾ .ಎ.ಎಂ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿಬಿಎಂಪಿ) |
| 05 | ಶ್ರೀ ವಿಜಯ್ ಕುಮಾರ್ ಎಂ.ಬಿ | ಕಾರ್ಯದರ್ಶಿ ಮತ್ತು ಸಂಚಾಲಕರು |
| 06 | ಶ್ರೀಮತಿ ಕಾಂಚನ | ಸಹಾಯಕ ಕಂದಾಯ ಅಧಿಕಾರಿ (ಕಂದಾಯ) |
| 07 | ಶ್ರೀ ರವೀಂದ್ರ ಎಚ್.ಎಸ್ | ಕಾ.ಅ (ದಪೂ-5) ಬಿ.ಡಬ್ಲ್ಯು.ಎಸ್.ಎಸ್.ಬಿ |
| 08 | ಶ್ರೀ ದೇಸಾಯಿ | ಸ.ಕಾ.ಅ (ದಪೂ-5) ಬಿ.ಡಬ್ಲ್ಯು.ಎಸ್.ಎಸ್.ಬಿ |
| 09 | ಶ್ರೀ ಯಶ್ವಂತ್ | ಸ.ಕಾ.ಅ (ದಪೂ-6) ಬಿ.ಡಬ್ಲ್ಯು.ಎಸ್.ಎಸ್.ಬಿ |
| 10 | ಶ್ರೀ ಶಿವಕುಮಾರ್ | ಸಬ್‌ಇನ್ಸ್‌ಪೆಕ್ಟರ್ ಸಂಚಾರ ಪೋಲಿಸ್ ಮೈಕೋಲೇಔಟ್ |
| 11 | ಶ್ರೀ ಮಲ್ಲಿಕ್ ಸಾಬ್ | ಎ.ಎಸ್.ಐ (ಕಾ ಮತ್ತು ಸು) ತಿಲಕನಗರ ಪೋಲಿಸ್ |
| 12 | ಶ್ರೀ ಸುರೇಂದ್ರಾಚಾರ್ | ಸಬ್ ಇನ್ಸ್‌ಪೆಕ್ಟರ್ (ಕಾ ಮತ್ತು ಸು) ಸುದ್ದಗುಂಟೆಪಾಳ್ಯ ಪೋಲಿಸ್ |
| 13 | ಶ್ರೀ ರಾಜೇಶ್ ಎಂ | ಸಹಾಯಕ ಅಭಿಯಂತರರು (ಯೋಜನೆ – ದಕ್ಷಿಣ) |
| 14 | ಶ್ರೀ ಮೊಹಮ್ಮದ್ ಲಿಯಾಕತ್ ಅಲಿ | ಸಹಾಯಕ ಅಭಿಯಂತರರು (ಯೋಜನೆ – ಕೇಂದ್ರ) |
| 15 | ಶ್ರೀ ಉಮೇಶ್ ಎಂ.ಸಿ | ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) |
| 16 | ಡಾ॥ ಮಧುಸೂಧನ್‌ಎಚ್.ಎಂ | ಆರೋಗ್ಯ ವೈದ್ಯಾಧಿಕಾರಿಗಳು, ಆರೋಗ್ಯ ಇಲಾಖೆ |
| 17 | ಶ್ರೀ ಮಾಯಣ್ಣಗೌಡ | ಪರೀವಿಕ್ಷಕರು (ಪಶುಸಂಗೋಪನಾ ಇಲಾಖೆ) |
| 18 | ಶ್ರೀ ನಾಗರಾಜ್ ಆರ್. | ಎ.ಎಸ್.ಐ ಸಂಚಾರ ಪೋಲಿಸ್ ಮೈಕೋ ಲೇಔಟ್ |
| 19 | ಶ್ರೀ ಶರತ್ ಬಾಬು .ಪಿ | ಹಿರಿಯ ಆರೋಗ್ಯ ಪರೀವಿಕ್ಷಕರು |
| 20 | ಶ್ರೀ ನರೇಂದ್ರ ಬಾಬು | ಆರ್.ಎಫ್.ಒ ಅರಣ್ಯ ಇಲಾಖೆ |
| 21 | ಶ್ರೀ ಗೌತಮ್ ವೈ | ಕಿರಿಯ ಆರೋಗ್ಯ ಪರೀವಿಕ್ಷಕರು (ಘನತ್ಯಾಜ್ಯ) |

Scanned by CamScanner

| | | |
|---|---|---|
| 22 | ಶ್ರೀ ಕಪಿರಾಜ ಕೆ | ವಾರ್ಡ್ ಮಾರ್ಷಲ್ |
| 23 | ಶ್ರೀ ದಿವಾಕರ್ | ಮಾಜಿ ಕಾರ್ಪೊರೇಟರ್ |
| 24 | ಶ್ರೀಮತಿ ದೇವಿಕಾ ಮೂರ್ತಿ | ಜಯನಗರ ಮಹಿಳಾ ಅಧ್ಯಕ್ಷರು (ಕಾಂಗ್ರೆಸ್) |
| 25 | ಶ್ರೀ ಜ಼ಾಕೀರ್ ಎಸ್.ಜ಼ಡ್ | ಸ್ಥಳೀಯ ನಾಗರೀಕ, 9ನೇ ಬ್ಲಾಕ್ ಜಯನಗರ |
| 26 | ಶ್ರೀ ಶಫೀ ಬಾಯಿ | ಸ್ಥಳೀಯ ನಾಗರೀಕ, 9ನೇ ಬ್ಲಾಕ್ ಜಯನಗರ |
| 27 | ಶ್ರೀ ವಾಸು | ಸ್ಥಳೀಯ ನಾಗರೀಕ, 9ನೇ ಬ್ಲಾಕ್ ಜಯನಗರ |
| 28 | ಶ್ರೀ ಮುನಿರತ್ನ ವಿ | ಸ್ಥಳೀಯ ನಾಗರೀಕ, ಎನ್.ಎ.ಎಲ್ ಲೇಔಟ್ |
| 29 | ಶ್ರೀ ಮನೋಹರ್ ಕೆ | ಸ್ಥಳೀಯ ನಾಗರೀಕ, ಎನ್.ಎ.ಎಲ್ ಲೇಔಟ್ |
| 30 | ಶ್ರೀ ನವಾಜ಼್ ಮೊಹಮ್ಮದ್ | ಸ್ಥಳೀಯ ನಾಗರೀಕ, ಎನ್.ಎ.ಎಲ್ ಲೇಔಟ್ |
| 31 | ಶ್ರೀ ಚೆಲ್ವಮಣಿ | ಸ್ಥಳೀಯ ನಾಗರೀಕ, 9ನೇ ಬ್ಲಾಕ್ ಜಯನಗರ |
| 32 | ಇತರ ಅಧಿಕಾರಿಗಳು ಮತ್ತು ವಾರ್ಡ್170 ರ ಸ್ಥಳೀಯ ನಾಗರೀಕರು ಜಯನಗರ | |

**ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಿದ್ದ ಮಾನ್ಯ ಶಾಸಕರು ಜಯನಗರ ಮತ್ತು ಎಲ್ಲಾ ಸದಸ್ಯರು ಹಾಗೂ ಅಧಿಕಾರಿ ವರ್ಗದವರಿಗೆ ಸ್ವಾಗತವನ್ನು ಕೋರುತ್ತಾ ಸಭೆಯನ್ನು ಪ್ರಾರಂಭಿಸಿದರು**

1. ಹಳೇ ಗುರಪ್ಪನಪಾಳ್ಯ ಮುಖ್ಯರಸ್ತೆಯಲ್ಲಿನ ಮುನಿಚಿನ್ನಪ್ಪ ಕಲ್ಯಾಣ ಮಂಟಪದ ಹತ್ತಿರ ಎರಡು ಹೊಸ ಹೋಟೆಲ್‌ಗಳು ಪ್ರಾರಂಭಗೊಂಡಿದ್ದು, ಸದರಿ ಹೋಟೆಲ್‌ಗೆ ಬರುವ ಸಾರ್ವಜನಿಕರು ರಸ್ತೆ ಬದಿಯಲ್ಲಿ ವಾಹನ ನಿಲುಗಡೆ ಮಾಡುತ್ತಿರುತ್ತಾರೆ. ಇದರಿಂದಾಗಿ ಈ ರಸ್ತೆಯಲ್ಲಿ ಸಂಚರಿಸುವ ವಾಹನಗಳಿಗೆ ತುಂಬಾ ತೊಂದರೆಯಾಗುತ್ತಿರುತ್ತದೆ. ಆದುದರಿಂದ ಸದರಿ ರಸ್ತೆಯಲ್ಲಿ **'No Parking'** ಬೋರ್ಡ್ ಅಳವಡಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

   (ಮನವಿದಾರರು: ರಿಜ್ವಾನ್, ಮಾಜಿ ಬಿಬಿಎಂಪಿ ಸದಸ್ಯರು. ಕ್ರಮ: ಇನ್ಸ್‌ಪೆಕ್ಟರ್ ಸಂಚಾರ ಪೋಲಿಸ್ ಮೈಕೋ ಲೇಔಟ್ ಕ್ರಮ ವಹಿಸುವುದು)

2. ಈಸ್ಟ್ ಎಂಡ್ ಮುಖ್ಯರಸ್ತೆಯ ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾ ಕಛೇರಿಯ ಹತ್ತಿರ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡು ಫಾಸ್ಟ್ ಫುಡ್ ವ್ಯಾಪಾರ ಮತ್ತು ಪೆಟ್ಟಿ ಅಂಗಡಿ ನಿರ್ಮಿಸುತ್ತಿರುತ್ತಾರೆ. ಈ ಸಂಬಂಧ ಕೂಡಲೇ ಒತ್ತುವರಿ ಮಾಡಿಕೊಂಡಿರುವ ಪಾದಚಾರಿ ಮಾರ್ಗವನ್ನು ತೆರವುಗೊಳಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

   (ದೂರುದಾರರು: ಆರ್.ಡಬ್ಲ್ಯೂ.ಎ, 9ನೇ ಬ್ಲಾಕ್ ಜಯನಗರ. ಕ್ರಮ: ಸಹಾಯಕ ಅಭಿಯಂತರರು (ಬಿಬಿಎಂಪಿ ಮತ್ತು ಹಿರಿಯ ಆರೋಗ್ಯ ಪರಿವೀಕ್ಷರು ಕ್ರಮ ವಹಿಸುವುದು)

Scanned by CamScanner

3. ಜಲಭವನ ಮುಖ್ಯ ರಸ್ತೆಯ ಎರಡು ಬದಿಯಲ್ಲಿ ಅನಧಿಕೃತವಾಗಿ ವಾಹನಗಳು ನಿಲುಗಡೆ ಹಾಗೂ ರಸ್ತೆ ಬದಿಯಲ್ಲಿಯೇ ಮೊಬೈಲ್ ಕಾರ್ ಸರ್ವೀಸ್ ಸ್ಟೇಷನ್ ಮಾಡುತ್ತಿದ್ದು, ಇದರಿಂದ ಈ ರಸ್ತೆಯಲ್ಲಿ ಸಾರ್ವಜನಿಕ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಆದ್ದರಿಂದ ಸಂಚಾರಿ ಪೋಲಿಸ್ ಠಾಣೆ ಮೈಕೋ ಲೇಔಟ್‌ರವರು ಆ ದಿನವೇ ಅನಧಿಕೃತ ವಾಹನಗಳ ನಿಲುಗಡೆ ಮಾಡಿರುವುದನ್ನು ತೆರವುಗೊಳಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.
(ದೂರುದಾರರು: ಶ್ರೀ ನವಾಜ್ ಮೊಹಮ್ಮದ್ ಮತ್ತು ಶ್ರೀ ಅಭಿಜಿತ್ ಯು ಬೆಂಗೇರಿ, ಸ್ಥಳೀಯ ನಾಗರೀಕರು, ಎನ್.ಎ.ಎಲ್ ಲೇಔಟ್. ಕ್ರಮ: ಇನ್ಸ್‌ಪೆಕ್ಟರ್ ಸಂಚಾರ ಪೋಲಿಸ್ ಮೈಕೋ ಲೇಔಟ್ ಕ್ರಮ ವಹಿಸುವುದು)

4. 36ನೇ ಅಡ್ಡ ರಸ್ತೆಯಿಂದ ಜಲಭವನ ರಸ್ತೆಗೆ ಸೇರುವ ಅಡ್ಡ ರಸ್ತೆಯ ಎರಡು ಕಡೆಗೂ ಖಾಲಿ ನಿವೇಶನಗಳು (ಬಿ.ಡಿ.ಎ ಯಿಂದ ಮಂಜೂರಾದ ನಿವೇಶನಗಳು) ಇದ್ದು ಸದರಿ ನಿವೇಶನಗಳಲ್ಲಿ ಅನಧಿಕೃತವಾಗಿ ವಾಹನ ನಿಲುಗಡೆ ಮಾಡುತ್ತಿದ್ದು ಈ ಸ್ಥಳದಲ್ಲಿ ಅನಾಮಧೇಯ ವ್ಯಕ್ತಿಗಳು ಪದೇ ಪದೇ ಅನುಪಯುಕ್ತ ವಸ್ತುಗಳು ಮತ್ತು ತ್ಯಾಜ್ಯಗಳನ್ನು ಹಾಕುತ್ತಿರುತ್ತಾರೆ. ಈ ಸಂಬಂಧ ಆಗಿಂದಾಗ್ಗೆ ಹಲವು ಬಾರಿ ಪಾಲಿಕೆಯಿಂದ ಸದರಿ ಅನುಪಯುಕ್ತ ವಸ್ತುಗಳನ್ನು ಮತ್ತು ತ್ಯಾಜ್ಯಗಳನ್ನು ತೆರವುಗೊಳಿಸಲಾಗುತ್ತಿದೆ. ಆದರೆ ರಾತ್ರಿ ವೇಳೆ ಪದೇ ಪದೇ ಅನಧಿಕೃತವಾಗಿ ವಾಹನ ನಿಲುಗಡೆ, ಅನುಪಯುಕ್ತ ವಸ್ತುಗಳನ್ನು ಮತ್ತು ತ್ಯಾಜ್ಯಗಳನ್ನು ಹಾಕುತ್ತಿರುವುದು ಅಭ್ಯಾಸವಾಗಿರುತ್ತದೆ. ಆದ್ದರಿಂದ ಸದರಿ ರಸ್ತೆಯಲ್ಲಿ ಸಾರ್ವಜನಿಕ ಹಿತಾದೃಷ್ಟಿಯಿಂದ ಅನಧಿಕೃತವಾಗಿ ವಾಹನ ನಿಲುಗಡೆ ಮಾಡದಂತೆ ಮತ್ತು ಭಾರಿ ವಾಹನಗಳು ಬರದಂತೆ ಒಂದು ವಾರದಲ್ಲಿ ಸೂಕ್ತ ಬ್ಯಾರಿಕೆಡಿಂಗ್ ಹಾಕುವಂತೆ ಸಭೆಯಲ್ಲಿ ನಿರ್ಧರಿಸಲಾಯಿತು
(ದೂರುದಾರರು: ಆರ್.ಡಬ್ಲ್ಯೂ.ಎ, ಎನ್.ಎ.ಎಲ್ ಲೇಔಟ್. ಕ್ರಮ: ಇನ್ಸ್‌ಪೆಕ್ಟರ್ ಸಂಚಾರ ಪೋಲಿಸ್ ಮೈಕೋ ಲೇಔಟ್ ಹಾಗೂ ಸಹಾಯಕ ಅಭಿಯಂತರರು (ಬಿಬಿಎಂಪಿ) ಕ್ರಮ ವಹಿಸುವುದು)

5. ಜಲಭವನ ಮುಖ್ಯ ರಸ್ತೆಯ ವಸತಿ ನಿವೇಶನದಲ್ಲಿ ಅನಧಿಕೃತವಾಗಿ ಕಾರುಗಳ ವಾಟರ್ ಸರ್ವೀಸ್ ಸ್ಟೇಷನ್ ಹಾಗೂ ನೀರು ಸರಬರಾಜು ಮಾಡುತ್ತಿದ್ದು ಇದರಿಂದ ಎನ್.ಎ.ಎಲ್ ಲೇಔಟ್‌ನ ಬೋರ್‌ವೆಲ್‌ಗಳ ನೀರಿನ ಮಟ್ಟ ತಗ್ಗಿ ನೀರಿನ ಅಭಾವ ಹೆಚ್ಚಾಗಿರುತ್ತದೆ, ಈ ಸಂಬಂಧ ಸ್ಥಳ ಪರಿಶೀಲಿಸಿ ವರದಿ ನೀಡಲು ಸಭೆಯಲ್ಲಿ ನಿರ್ಧರಿಸಲಾಯಿತು.
(ದೂರುದಾರರು: ಆರ್.ಡಬ್ಲ್ಯೂ.ಎ, ಎನ್.ಎ.ಎಲ್ ಲೇಔಟ್. ಕ್ರಮ: ಆರೋಗ್ಯ ವೈದ್ಯಾಧಿಕಾರಿಗಳು, ಜಯನಗರ ಕ್ರಮ ವಹಿಸುವುದು)

6. 34ನೇ 'ಸಿ' ಅಡ್ಡರಸ್ತೆಯಿಂದ (ನ್ಯೂ ಉಡುಪಿ ಫುಡ್) ಹಾಗೂ ವಿಷ್ಣುವರ್ಧನ್ ಉದ್ಯಾನವನದ ಕಡೆಗೆ ಅಂದರೆ 3ನೇ ಅಡ್ಡರಸ್ತೆ, ಎನ್.ಎ.ಎಲ್ ಲೇಔಟ್‌ಗೆ ಹೋಗುವ ದಾರಿಯಲ್ಲಿ, ಈಸ್ಟ್ ಎಂಡ್ ಮುಖ್ಯರಸ್ತೆ ಇದ್ದು, ಇಲ್ಲಿ ರಸ್ತೆ ವಿಭಜಕ ಇರುತ್ತದೆ. ಇದರಿಂದ ವಯೋವೃದ್ದರುಗಳಿಗೆ ರಸ್ತೆ ದಾಟಲು

Scanned by CamScanner

ತೊಂದರೆಯಾಗಿರುತ್ತದೆ. ಆದುದರಿಂದ ಸದರಿ ರಸ್ತೆಯಲ್ಲಿ ವಿಭಜಕ ದಾಟಿ ಪಾದಚಾರಿಗಳ ಸುರಕ್ಷಿತ ಓಡಾಟಕ್ಕಾಗಿ ವೈಜ್ಞಾನಿಕ ರಸ್ತೆಯ ಉಬ್ಬುಗಳನ್ನು (ಹೆಚ್.ಆರ್.ಪಿ.ಸಿ) ನಿರ್ಮಿಸಲು ದಿನಾಂಕ 27.11.2021ರಂದು ಇನ್ಸ್‌ಪೆಕ್ಟರ್ ಸಂಚಾರ ಪೋಲಿಸ್ ಮೈಕೋ ಲೇಔಟ್ ರವರು ಕಾರ್ಯಪಾಲಕ ಅಭಿಯಂತರರು ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ಅನೆಕ್ಸ್ ಕಟ್ಟಡ, ಬಿಬಿಎಂಪಿ ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಕೋರಲಾಗಿದೆಯೆಂದು ಸಭೆಯಲ್ಲಿ ವಿವರಿಸಿದರು. ಅದರಂತೆ ಕಾರ್ಯಪಾಲಕ ಅಭಿಯಂತರರು, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ರವರು ಮುಂದಿನ ಸಭೆಗೆ ಹಾಜರಾಗಲು ಹಾಗೂ ರಸ್ತೆ ಉಬ್ಬುಗಳನ್ನು ನಿರ್ಮಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

(ದೂರುದಾರರು: ಆರ್.ಡಬ್ಲ್ಯೂ.ಎ, ಎನ್.ಎ.ಎಲ್ ಲೇಔಟ್.)

7. ಈಸ್ಟ್ ಎಂಡ್ ಮುಖ್ಯ ರಸ್ತೆಯ ಕಾರ್ಮಲ್ ಕಾನ್ವೆಂಟ್ ಮುಂಭಾಗದಲ್ಲಿ ರಸ್ತೆಯ Paved Shoulders ನಲ್ಲಿ ಅನಧಿಕೃತವಾಗಿ ವಾಹನ ನಿಲುಗಡೆ ಮಾಡುತ್ತಿರುವುದರಿಂದ ಸದರಿ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಹಾಗೂ ಕಾನ್ವೆಂಟ್ ಮಕ್ಕಳಿಗೆ ತುಂಬಾ ತೊಂದರೆಯಾಗುತ್ತಿರುತ್ತದೆ. ಆದ್ದರಿಂದ ವಾಹನಗಳ ನಿಲುಗಡೆ ಮಾಡದಂತೆ ಕ್ರಮ ವಹಿಸದಲು ಅಂದಿನ ದಿನವೇ ಸಭೆಯಲ್ಲಿ ನಿರ್ಧರಿಸಲಾಯಿತು.

   (ದೂರುದಾರರು: ಶ್ರೀ ದಿವಾಕರ್, ಮಾಜಿ ಸದಸ್ಯರು, ಬಿಬಿಎಂಪಿ. ಕ್ರಮ: ಇನ್ಸ್‌ಪೆಕ್ಟರ್, ಸಂಚಾರ ಪೊಲೀಸ್, ಮೈಕೋ ಲೇಔಟ್‌ರವರು ಕ್ರಮ ವಹಿಸುವುದು)

8. ವಾರ್ಡ್ ವ್ಯಾಪ್ತಿಯಲ್ಲಿ ಸರ ಕಳ್ಳರು, ಅಕ್ರಮ ಚಟುವಟಿಕೆ ಮತ್ತು ಇತರ ಕಳ್ಳತನವನ್ನು ತಡೆಗಟ್ಟಲು ಸೂಕ್ತ ಸ್ಥಳಗಳಲ್ಲಿ ಸಿ.ಸಿ.ಕ್ಯಾಮರಾ ಅಳವಡಿಸುವ ಕಾಮಗಾರಿ ಕೆಲಸವು ಪ್ರಗತಿಯಲ್ಲಿರುತ್ತದೆ ಹಾಗೂ ತಿಲಕನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅಳವಡಿಸಲು ಅನುಮೋದನೆಯಾಗಿರುವ ಸ್ಥಳಗಳ ಪಟ್ಟಿಯನ್ನು ಸಭೆಯಲ್ಲಿ ವಿವರಿಸಲಾಯಿತು ಮತ್ತು ಪ್ರಾವಧಾನವಿದ್ದಲ್ಲಿ ಒಂದು ಹೆಚ್ಚುವರಿಯಾಗಿ ಈಸ್ಟ್ ಎಂಡ್ ಮುಖ್ಯರಸ್ತೆಯಲ್ಲಿ ಅಳವಡಿಸಲು ಕ್ರಮ ವಹಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

   (ಮನವಿದಾರರು: ಆರ್.ಡಬ್ಲ್ಯೂ.ಎ, 9ನೇ ಬ್ಲಾಕ್, ಜಯನಗರ. ಕ್ರಮ: ಇನ್ಸ್‌ಪೆಕ್ಟರ್ (ಕಾನೂನು ಮತ್ತು ಸುವ್ಯವಸ್ಥೆ) ತಿಲಕನಗರ ಪೋಲಿಸ್ ಕ್ರಮ ವಹಿಸುವುದು)

9. 28ನೇ ಮುಖ್ಯರಸ್ತೆ, 38ನೇ ಅಡ್ಡರಸ್ತೆಯಲ್ಲಿರುವ ಮೇವಾ ಪಾರ್ಕಿನಲ್ಲಿ ಗಾಂಜಾ ಸೇವನೆ ಮಾಡುತ್ತಿರುತ್ತಾರೆಂದು ಸ್ಥಳೀಯರು ಸಭೆಯಲ್ಲಿ ದೂರಿರುತ್ತಾರೆ. ಈ ಬಗ್ಗೆ ಮಾನ್ಯ ಜಯನಗರ ವಿಧಾನಸಭಾ ಶಾಸಕರು ಕ್ರಮ ತೆಗೆದುಕೊಳ್ಳುವಂತೆ ಹಾಗೂ ತಿಲಕನಗರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಇಲ್ಲಿಯವರೆಗೆ ಅಕ್ರಮ ಚಟುವಟಿಕೆ/ಗಾಂಜಾ ಸೇವನೆ ಸಂಬಂಧ ಎಫ್.ಐ.ಆರ್ ದಾಖಲಾಗಿರುವ ವಿವರಗಳನ್ನು ಮುಂದಿನ ಸಭೆಯಲ್ಲಿ ನೀಡಲು ಇನ್ಸ್‌ಪೆಕ್ಟರ್, ತಿಲಕನಗರ ಪೊಲೀಸ್ ಠಾಣೆ ರವರಿಗೆ ಸೂಚಿಸಿರುತ್ತಾರೆ.

Scanned by CamScanner

10. ವಾರ್ಡ್ ವ್ಯಾಪ್ತಿಯಲ್ಲಿ ಪದೇ ಪದೇ ಘನತ್ಯಾಜ್ಯ ಹಾಕುವ ಕಪ್ಪು ಸ್ಥಳಗಳನ್ನು ಗುರುತಿಸಿ, ಸದರಿ ಸ್ಥಳಗಳಲ್ಲಿ ತ್ಯಾಜ್ಯ ನಿರ್ವಹಣೆ ಅರಿವು ಕಾರ್ಯಕ್ರಮಗಳನ್ನು ನಡೆಸಲು ಮಾನ್ಯ ಶಾಸಕರು ಸೂಚಿಸಿದರು. ಅದರಂತೆ ಈ ಕೆಳಕಂಡ ಕಪ್ಪು ಸ್ಥಳಗಳಲ್ಲಿ ಅರಿವು ಕಾರ್ಯಕ್ರಮ ನಡೆಸಲಾಗುವುದೆಂದು ಕಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ವಿವರಿಸಿದರು.

| ಕ್ರಸಂ | ಕಪ್ಪು ಸ್ಥಳಗಳ ಹೆಸರು | ದಿನಾಂಕ |
|---|---|---|
| (i) | ಅರಸು ಕಾಲೋನಿ | 01.02.2022 |
| (ii) | ಪುಟ್ಟಯ್ಯನಪಾಳ್ಯ | 02.02.2022 |
| (iii) | ಕಾರ್ಪೊರೇಷನ್ ಕಾಲೋನಿ | 05.02.2022 |
| (iv) | 7 'ಎ' ಮುಖ್ಯರಸ್ತೆ (ಮೀನಾ ಮಸೀದಿ) | 07.02.2022 |
| (v) | 38ನೇ ಅಡ್ಡರಸ್ತೆ | 14.02.2022 |

11. ಅರಸು ಕಾಲೋನಿಯಲ್ಲಿ ಅಳವಡಿಸಿರುವ ನೀರು ಸರಬರಾಜು ಮತ್ತು ಒಳಚರಂಡಿ ಪೈಪ್ ಲೈನ್ ತುಂಬಾ ಹಾಳಾಗಿದ್ದು ದುರಸ್ಥಿಪಡಿಸಬೇಕಾಗಿರುತ್ತದೆಂದು ಅರಸು ಕಾಲೋನಿಯ ನಿವಾಸಿಗಳು ಸಭೆಯಲ್ಲಿ ಕೋರಿರುತ್ತಾರೆ. ಆದ್ದರಿಂದ ಹೊಸ ಪೈಪ್ ಲೈನ್ ಅಳವಡಿಸಲು ಅಂದಾಜು ಪಟ್ಟಿಯನ್ನು ಮತ್ತು ಅನುದಾನ ಪ್ರಸ್ತಾವನೆಯನ್ನು ಶಾಸಕರು ಕಛೇರಿಗೆ ಸಲ್ಲಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ನಿರ್ಣಯ:- ಈ ಮೇಲ್ಕಂಡ ವಿಷಯಗಳಿಗೆ ಸಮಿತಿಯು ಒಪ್ಪಿಗೆ ತಿಳಿಸಿರುತ್ತದೆ. ಮಾನ್ಯ ಶಾಸಕರು ವಾರ್ಡ್ ಸಮಿತಿಯ ಮಾರ್ಪಿಡಿತ ಮೇಲೆ ಕಾಣಿಸಿರುವ ಎಲ್ಲಾ ವಿಷಯಗಳ ಬಗ್ಗೆ ಸಮರ್ಪಕವಾಗಿ ಕೆಲಸ ನಿರ್ವಹಿಸಲು ಸೂಚಿಸಿದರು, ಮುಂದುವರಿದು ಪ್ರಸ್ತುತ ಸಭೆಗೆ ಹಾಜರಾಗದ ಬೆಸ್ಕಾಂ (ದ-1), ಬೆಸ್ಕಾಂ (ದ-14), ಬೃಹತ್ ನೀರುಗಾಲುವೆ, ತೋಟಗಾರಿಕೆ ಮತ್ತು ಮಾರುಕಟ್ಟೆ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಕಡ್ಡಾಯವಾಗಿ ಹಾಜರಾಗಲು ಸೂಚಿಸಿರುತ್ತಾರೆ. ವಾರ್ಡ್ ಸಮಿತಿಯ ಅಧ್ಯಕರು ಸದಸ್ಯರುಗಳಿಗೆ ಹಾಗೂ ಪಾಲಿಕೆ ಅಧಿಕಾರಿಗಳಿಗೆ ವಂದಾನಾರ್ಪಣೆ ತಿಳಿಸುತ್ತಾ ದಿ: ____________ ರಂದು ಬೆಳ್ಳಗೆ 10.30 ಗಂಟೆಗೆ ಮತ್ತೆ ಸಭೆ ಸೇರಲು ಹಾಗೂ ಆ ಸಭೆಯಲ್ಲಿ ವಾರ್ಡ್‌ಗೆ ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಹಾಜರಾಗಲು ಪತ್ರ ಕಳುಹಿಸುವಂತೆ ತಿಳಿಸಿದರು.

29/01/22

ಕಾರ್ಯದರ್ಶಿ ಮತ್ತು ಸಂಚಾಲಕರು
ಹೆಸರು: ವಿಜಯ್ ಕುಮಾರ್ ಎಂ.ಬಿ
ಸಹಾಯಕ ಅಭಿಯಂತರರು

Scanned by CamScanner